ಡಾ: ಹೆಚ್. ಸಿ. ಮಹದೇವಪ್ಪ:– ನನ್ನ ಕ್ಷೇತ್ರವನ್ನೂ ಮುನಿಸಿಪಾಲಿಟಿ ಮಾಡಬೇಕು, ಅದಕ್ಕೆ ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು:– ಮಾನ್ಯ ಸತ್ಯನಾರಾಯಣರವರೇ, ಮಾನ್ಯ ರೇವು ನಾಯಕ್‌ರವರ ಪ್ರಶ್ನೆಗೆ ಅವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಕೊಡಬೇಕು.

(ಏ) ವಿಷಯ : ಮೀಸಲು ಕ್ಷೇತ್ರವಾದ ಕಮಲಾಪುರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಂತ್ರಿಗಳಿಂದ ಉತ್ತರ.

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ರೇವು ನಾಯಕ್‌ರವರು, ಕಮಲಾಪುರ ಕ್ಷೇತ್ರದ ಗ್ರಾಮಗಳಾದ ದೊಂಗರಗಾಂವಗೋಗಿ ತಾಂಡ, ಗುಂಜಾ ಬಬ್ಲಾದ ಹರಿಹರ ತಾಂಡ, ಸಂಗೊಳಗಿ ಸಿ, ದಿನಸಿ ತಾಂಡಗಳಲ್ಲಿ, ಉಂಟಾಗಿರುವಂತಹ ನೀರಿನ ಸಮಸ್ಯೆಯ ಕುರಿತು, ನನ್ನ ಗಮನವನ್ನು ಸೆಳೆದಿದ್ದಾರೆ. ನಾನು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು, ನಾನು ತಕ್ಷಣವೇ ಇವತ್ತೆ ಅವರೊಡನೆ ಟೆಲಿಫೋನ್‌ನಲ್ಲಿ ಮಾತನಾಡಿ, ಅಲ್ಲಿ ಏನು ತೊಂದರೆ ಇದೆ. ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಕೊಡಿ, ಎಂದು ನಾನು ನಿರ್ದೇಶನವನ್ನು ಕೊಟ್ಟಿದ್ದೇನೆ.

(ಐ) ವಿಷಯ : ಹಂಪಿಯ ಐತಿಹಾಸಿಕ ಪರಂಪರೆಯನ್ನು ಉಳಿಸಿಕೊಳ್ಳಲು ಸದನ ಸಮಿತಿ ನೇಮಕ ಮಾಡುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ನಾನು ನಾಲ್ಕೈದು ನಿಮಿಷಗಳ ಮೇಲೆ ನಾನು ತೆಗೆದುಕೊಳ್ಳುವುದಿಲ್ಲ. ನನಗೆ ನನ್ನ ಜವಾಬ್ದಾರಿ ಅರ್ಥವಾಗುತ್ತದೆ. ಇಲ್ಲಿ ಬಹಳ ಗಂಭೀರವಾದದ್ದು, ಇದಕ್ಕೆ ಯಾರು ಉತ್ತರವನ್ನು ಕೊಡುತ್ತಿರೋ, ದಯಮಾಡಿ ಕೊಡಿ. ನಮ್ಮ ವಿಶ್ವವಿಖ್ಯಾತ ಹಂಪೆಯನ್ನು ಉಳಿಸಿ ಎಂದು, ಒಂದು ಅಂಧೋಳನ ಹೊಸಪೇಟೆಯ ಶ್ರೀ ಅಚ್ಯುತ ದೇವರಾಯರ ಅಧ್ಯಕ್ಷತೆಯಲ್ಲಿ, ರಾಜ್ಯಮಟ್ಟದ ಒಂದು ಸಮಿತಿಯಾಗಿ, ಅದರಲ್ಲಿ ಡಾ: ಎಂ. ಚಿದಾನಂದ ಮೂರ್ತಿಯವರೆಲ್ಲಾ ಅಲ್ಲಿ ಸೇರಿಕೊಂಡು, ಅದರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಮೊನ್ನೆ ಪತ್ರಿಕಾ ಗೋಷ್ಠಿಯಲ್ಲಿ ಅದರ ಎಲ್ಲಾ ವಿವರಗಳು ಬಂದಿದೆ. ತಮಗೆ ಎಲ್ಲಾ ಗೊತ್ತಿರುವಂತೆ ಮಾನ್ಯ ಜೆ. ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾರ, ಇದರ ಬಗ್ಗೆ ಬಹಳಷ್ಟು ಚರ್ಚೆಗಳಾಗಿ, ಆ ಸಂದರ್ಭಗಳಲ್ಲಿ ಆ ತೀರ್ಥಕ್ಷೇತ್ರದಲ್ಲಿ ಹಿಪ್ಪಿಗಳಿಂದ ಆಗುತ್ತಿರುವಂತಹ ಮಾಲಿನ್ಯದ ಬಗ್ಗೆ ಅವರು ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದರು. ಅದು ಆದಮೇಲೆ ಏನಾಯಿತೆಂಬುದು ಗೊತ್ತಿಲ್ಲ. ಅಲ್ಲಿ ವಿರೋಪಾಪುರ ಎಂಬ ದ್ವೀಪದ ರೆಸಾರ್ಟ್ ಅದು ಹಿಪ್ಪಿಗಳ ಕಾಮಕ್ರೀಡೆಗಳಿಗೆ ಒಂದು ಕೇಂದ್ರವಾಗಿದೆಯೆಂಬುದು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿದೆ. ಈ ಹಂಪಿಯಲ್ಲಿ ಚರಸ್, ಗಾಂಜಾ, ಮಾದಕ ದ್ರವ್ಯಗಳು ಯಥೇಚ್ಛವಾಗಿ ಮಾರಾಟಗಾಗುತ್ತಿದೆ, ಎಂಬ ಸಂಗತಿಯು

ಸರ್ಕಾರದ ಗಮನಕ್ಕೆ ಬಂದಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಆಶ್ಚರ್ಯಕರವಾದಂತಹ ಘಟನೆಯೆಂದರೆ, ಒಂದು ರಿಸಾರ್ಟ್‌ನಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರೇ, Indians not allowed' ಎಂದು ನಾಮಫಲಕವನ್ನು ಹಾಕಿ, ಅದನ್ನು ಕಿತ್ತು ಹಾಕಿ, ದೊಡ್ಡ ಗಲಾಟೆಗಳು ಆಗಿರುವಂತಹ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ವಿಜಯ ವಿಠಲ ದೇವಲಾಯವೆಂದು ಇದೆ. ಅದಕ್ಕೆ ತಾಗಿಕೊಂಡಿರುವಂತಹ ಹೊನ್ನೂರ್ ಸ್ವಾಮಿ ದರ್ಗಾ ಇದೆ. ಅಲ್ಲಿ ಈಗಾಗಲೇ ಹಸಿರು ಶಾಲು, ನಿಶಾನೆಯನ್ನು ಹಾಕಿ, ಆ ದರ್ಗಾ ಸ್ಪಷ್ಟವಾಗಿ ಈರಣ್ಣನ ಗುಡಿ ಎಂದು ಪ್ರಖ್ಯಾತವಾಗಿದ್ದರೂ ಸಹ, ಅಲ್ಲಿ ಶಿವಲಿಂಗ ಮೇಲ್ಭಾಗದಲ್ಲಿ ಎಲ್ಲಾ ಕಾಣುತ್ತಿದ್ದರೂ ಸಹ, ಅಲ್ಲಿ ಹಸಿರು ಶಾಲುಗಳನ್ನು ಹೊದಿಸಿ, ಅದೆಲ್ಲವನ್ನು ಹಿಪ್ಪಿಗಳು ಮತ್ತು ಕೆಲವು ಮುಸ್ಲಿಂ ಬಂಧುಗಳು ತಮ್ಮ ಕೇಂದ್ರಗಳನ್ನು ಮಾಡಿಕೊಳ್ಳುವಂತಹ ಪ್ರಯತ್ನಗಳು ನಡೆಯುತ್ತಿವೆ; ಮತ್ತೆ ಅಲ್ಲಿ ಕಾಮಲಪುರ ವಿಜಯ ವಿಠಲ ದೇವಲಾಯಕ್ಕೆ ಹೋಗುವಂತಹ ತಾಳವಾರ ಘಟ್ಟ ರಸ್ತೆಯಲ್ಲಿ ಎಡಭಾಗದಲ್ಲಿ ಹನುಮಪಾದ ಅಥವಾ ವಿಷ್ಣುಪಾದ ಗುಡ್ಡದ ತುದಿಯಲ್ಲಿ ಆರು ಅಡಿ ಉದ್ದದ ಎರಡು ಪಾದುಕಗಳ ಬಂಡೆ ಇದೆ. ಅದನ್ನು ಕಿತ್ತು ಹಾಕಿದ್ದಾರೆ. ಈ ರೀತಿಯಾಗಿ ಅನೇಕ ಅನಾಹುತಗಳು ಆಗಿ, ಈ ವಿಶ್ವವಿಖ್ಯಾತವಾದ ಹಂಪೆ ಇವತ್ತು ನಮ್ಮ ಕೈಬಿಟ್ಟು ಹೋಗುತ್ತಾ ಇದೆ. ಅಲ್ಲಿ ವಾತಾವರಣ ಕೆಡುತ್ತಾ ಇದೆ. ನಾನು ಹೇಳುವಂಥಾದ್ದು, ಮುಂದೆ ಕಾನೂನು ವ್ಯವಸ್ಥೆ ಹದಗೆಟ್ಟು, ಅಲ್ಲಿ ಹಿಂದೂ ಮುಸ್ಲಿಂ ಹೋರಾಟ ಕೇಂದ್ರವಾಗಿ, ಬೇರೆ ರೀತಿ ಮಾರ್ಪಾಡು ಆಗಬೇಕೆಂದು ನಮ್ಮದೇನೂ ಅಪೇಕ್ಷೆ ಇಲ್ಲ ನಾನು ಸರ್ಕಾರಕ್ಕೆ ಸಲಹೆ ಕೊಡುವಂಥಾದ್ದು ಏನೆಂದರೆ, ಒಂದು ಸದನ ಸಮಿತಿಯನ್ನು ಮಾಡಿ. ಈ ಐತಿಹಾಸಿನ ಹಂಪೆಯನ್ನು ಉಳಿಸಿಕೊಳ್ಳಬೇಕು. ಅಲ್ಲಿ ಹಿಪ್ಪಿಗಳಿಂದ, ಬೇರೆಯವರಿಂದ, ಅದನ್ನು ಬೇರೆ ರೀತಿಯಲ್ಲಿ ದುರುಪಯೋಗಕ್ಕೆ ಅವಕಾಶವಾಗಬಾರದೆಂಬುದು ನಮ್ಮ ಕಳಕಳಿ ಇರುವಂಥಾದ್ದು. ಈಗಾಗಲೇ ಒಂದು ಸಮಿತಿ ಮಾಡಿ, ಡಾ: ಚಿದಾನಂದ ಮೂರ್ತಿಯವರಂಥವರು ಪ್ರೆಸ್ ಮೀಟ್ ಮಾಡಿದ ಮೇಲೆ ಸರ್ಕಾರ ಅದಕ್ಕೆ ಪ್ರತಿಕ್ರಿಯಿಸುತ್ತಿದೆ, ಕ್ರಮವನ್ನು ತೆಗೆದುಕೊಂಡಿದೆ, ಎಂದು ನಾನು ಭಾವಿಸಿದ್ದೇನೆ. ಮಾನ್ಯ ಜೆ. ಹೆಚ್. ಪಟೇಲ್‌ರವರು ಇದಕ್ಕೆ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದರು. ಅದು ಏನಾಯಿತು ಎಂಬ ಬಗ್ಗೆ ನಮಗೆ ಗೊತ್ತಿಲ್ಲ. ನಾವು ತಮ್ಮಲ್ಲಿ ವಿನಂತಿ ಮಾಡುವುದು, ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡಿ, ಅಲ್ಲಿ ಹೋಗಿ ಒಂದು ವರದಿಯನ್ನು ತಂದು ಕೊಟ್ಟು, ಆ ಐತಿಹಾಸಿಕ ಹಂಪೆ ಹಂಪೆಯಾಗಿ ಉಳಿಯಬೇಕು. ಇದು ನಮ್ಮ ಕಳಕಳಿ ಇರುವಂಥಾದ್ದು. ಇದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಏನು ಕ್ರಮವನ್ನು ತೆಗೆದುಕೊಂಡಿದೆ? ಸರ್ಕಾರದ ಗಮನಕ್ಕೆ ಬಂದಿದೆಯಾ? ಕಾನೂನು ಸುವ್ಯವಸ್ಥೆ ಹದಗೆಟ್ಟು, ಹಿಂದೂ ಮುಸ್ಲಿಂ ಎಂದು ಬಣ್ಣ ಕಟ್ಟಿ, ಅದಕ್ಕೆ ವಾತಾವರಣಕ್ಕೆ ಅವಕಾಶವನ್ನು ಮಾಡಿ ಕೊಡದೆ, ಕಟ್ಟೆಚ್ಚರ ವಹಿಸುವಂಥಾದ್ದು ಅಗತ್ಯವಿದೆಯೆಂದು ನಾನು

ಬಾವಿಸಿದ್ದೇನೆ. ಈ ಹಿನ್ನೆಲೆಯಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೆಂಬುದನ್ನು ದಯಮಾಡಿ ತಿಳಿಸಬೇಕು.

ಡಾ: ಹೆಚ್. ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೇ, ಹಂಪಿಯ ಸ್ಮಾರಕಗಳು ಪ್ರಾಮುಖ್ಯವಾದದ್ದು. Archaeological Survey of India, ಇತರ ಸ್ಮಾರಕಗಳು, ರಾಜ್ಯದ ಪ್ರಾಚ್ಯ ವಸ್ತು ಮತ್ತು ಸಂಗ್ರಹ ಇಲಾಖೆಯಿಂದ ಘೋಷಿತ ಸ್ಮಾರಕಗಳು ಆಗಿವೆ. ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣೆಗೆ, ಹಂಪಿ ಅಭಿವೃದ್ಧಿ ಪ್ರಾಧಿಕಾರವನ್ನು ಜಿಲ್ಲಾಧಿಕಾರಿ, ಬಳ್ಳಾರಿ, ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಜನವರಿ 2005ರಲ್ಲಿ ಈ ಬಗ್ಗೆ ಹಂಪಿ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮವನ್ನು ಜಾರಿಗೆ ತರಲಾಗಿದೆ. ಅಲ್ಲದೇ ಇಲ್ಲಿ ಐದು ಪಂಚಾಯತ್ ಗ್ರಾಮ ಪಂಚಾಯತ್‌ಗಳು ಈ ಪ್ರದೇಶದಲ್ಲಿ ಇರುತ್ತವೆ. Archaeological Survey of India (ASI) ಮತ್ತು ರಾಜ್ಯ ಪ್ರಾಚ್ಯವಸ್ತು ಇಲಾಖೆ ಪೋಷಿತ ಸ್ಮಾರಕಗಳ ಸಂರಕ್ಷಣೆಯನ್ನು ಮಾಡುತ್ತಿವೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ಜಿಲ್ಲಾಧಿಕಾರಿ, ಬಳ್ಳಾರಿ ಮತ್ತು ಕೊಪ್ಪಳ Archaeological Survey of India ಮತ್ತು ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಗಳಿಂದ ವರದಿಗಳನ್ನು ಈ ದಿನ ಕೋರಲಾಗಿದೆ. ಈ ಎರಡು, ಮೂರು ದಿನಗಳಲ್ಲಿ ವರದಿಗಳನ್ನು ಪಡೆದುಕೊಂಡು ಕ್ರೋಢಿಕರಿಸಿ ಸದನದ ಮುಂದೆ ಸಲ್ಲಿಸಲಾಗುವುದು. ಈ ವರದಿ ಬಂದ ಮೇಲೆ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಮಾನ್ಯ ಮುಖ್ಯಮಂತ್ರಿಯವರು ಬಂದಮೇಲೆ ಸವಿಸ್ತಾರವಾದ ಉತ್ತರವನ್ನು ಒದಗಿಸುತ್ತಾರೆ.

ಅಧ್ಯಕ್ಷರು:– ಮಾನ್ಯ ಮಹದೇವಪ್ಪನವರೇ, ಇದು ಗಂಭೀರವಾದಂತಹ ವಿಚಾರವಾಗಿದೆ ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ, ಮುಂದೆ ಒಂದು ದಿವಸ ಇದು ಬೇರೆ ರೀತಿಯಲ್ಲಿ, ಅದು ಒಂದು ವಿವಾದದ ಕೇಂದ್ರವಾಗುವುದು ಬೇಡ. ಅದಕ್ಕೋಸ್ಕರ ತಾವು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ತಕ್ಷಣ ಮಾತನಾಡಿ.

ಡಾ: ಹೆಚ್. ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೇ, ಇದು ಒಂದು ಪ್ರಮುಖವಾದಂತಹ ಮತ್ತು ಐತಿಹಾಸಿಕವಾದಂತಹ ಸ್ಮಾರಕವಾಗಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸರ್ಕಾರದ ವರದಿಯನ್ನು ಕೇಳಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡಿಬಿಟ್ಟರೆ ಬಹಳ ಸುಲಭವಾಗುತ್ತದೆ. ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಚಿದಾನಂದಮೂರ್ತಿಯವರು ದಾಖಲೆ ಸಮೇತ ಪತ್ರಿಕಾ ಗೋಷ್ಠಿ ಮಾಡಿ, ಇಡೀ ರಾಜ್ಯದ ಗಮನಕ್ಕೆ ಇದನ್ನು ತಂದಿದ್ದಾರೆ. ತಾವು ಹೇಳಿದುದು ಸರಿ ಇದೆ. ಮಾನ್ಯ ಸಭಾಧ್ಯಕ್ಷರು ತಿಳಿಸಿದ ಹಾಗೆ ಸರ್ಕಾರ ಇದರ ಬಗ್ಗೆ ತುರ್ತು ಗಮನ ಹರಿಸಿ, ಒಂದು ಸದನ ಸಮಿತಿ ಮಾಡಿ ಇದನ್ನು ಬಗೆಹರಿಸಲಿಲ್ಲ ಎಂದರೆ ಮುಂದೆ ಯಾವತ್ತೋ ಒಂದು ದಿನ ಇಡೀ ರಾಜ್ಯದಲ್ಲಿ ಗೊಂದಲವಾಗುವಂಥ ಪರಿಸ್ಥಿತಿ ಬರುತ್ತದೆ.

ಅದಕ್ಕೆ ಸರ್ಕಾರವೇ ಕಾರಣವಾಗಬಾರದು. ದಯವಿಟ್ಟು ಸದನ ಸಮಿತಿಯನ್ನು ನೇಮಕ ಮಾಡುವುದಕ್ಕೆ ತಾವು ಗಮನ ಹರಿಸಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಏಕೆ ಸದನ ಸಮಿತಿ ರಚಿಸಲು ಒತ್ತಾಯ ಮಾಡುತ್ತಿದ್ದೇವೆಂದರೆ, ಅಲ್ಲಿ ಕೆಲವು ದೇವಾಲಯಗಳು ದರ್ಗಾಗಳಾಗಿ ಪರಿವರ್ತನೆಯಾಗುತ್ತಿವೆ. ಹಿಂದೂ ಸ್ಮಾರಕಗಳ ಮೇಲೆ ಹಸಿರು ಬಟ್ಟೆಯನ್ನು ಹಾಕಿ ಅಲ್ಲಿ ಗೊಂದಲಕ್ಕೆ ಅವಕಾಶವಾಗುತ್ತಿದೆ. ಅಲ್ಲಿಗೆ ನೀವು ಹೋಗಿ ಬಂದರೆ ನಿಮಗೂ ಅರ್ಥವಾಗುತ್ತದೆ. ಇದಕ್ಕೆ, ಒಂದು ಸದನ ಸಮಿತಿಯಾದರೆ ನಿಷ್ಪಕ್ಷಪಾತವಾದಂಥ ವರದಿ ಸಿಗುತ್ತದೆ ಮತ್ತು ಅದನ್ನು ಬಿಗಿ ಮಾಡಿ ಐತಿಹಾಸಿಕ ಹಂಪೆಯನ್ನು ಉಳಿಸಿಕೊಳ್ಳಲು ಅವಕಾಶವಾಗುತ್ತದೆ. ಪರಿಸ್ಥಿತಿ ಕೈಮೀರಿ ಹೋಗುವುದಕ್ಕೆ ಮುಂಚೆಯೇ ತಾವು ಇದನ್ನು ಸದನ ಸಮಿತಿಗೆ ಒಪ್ಪಿಸಲು ಏನು ತೊಂದರೆಯಿದೆ ಸ್ವಾಮಿ? ಎರಡೂ ಮನೆಯ, ಎರಡೂ ಕಡೆಯಿರುವ ಸದಸ್ಯರುಗಳು ಸೇರಿ ಒಂದು ರಿಪೋರ್ಟ್ ಕೊಟ್ಟರೆ ಅದರಲ್ಲಿ ತೊಂದರೆಯೇನಿದೆ? ವಾಸ್ತವ ಪರಿಸ್ಥಿತಿ ನಿಮಗೆ ಗೊತ್ತಾಗುತ್ತದೆ, ದಯಮಾಡಿ ಅದನ್ನು ಮಾಡಿ.

ಡಾ: ಹೆಚ್. ಸಿ. ಮಹದೇವಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಹಂಪೆಯ ಚಾರಿತ್ರಿಕ ಮತ್ತು ಐತಿಹಾಸಿಕ ಹಿನ್ನೆಲೆಗಳನ್ನು ರಕ್ಷಣೆ ಮಾಡಲು ನಮ್ಮ ಸರ್ಕಾರಕ್ಕೆ ಯಾವುದೇ ಮುಜುಗರವಿಲ್ಲ. ಅದು ನಮ್ಮೆಲ್ಲರ ಕರ್ತವ್ಯ ಕೂಡ ಆಗಿದೆ. ನಾವು ಇದರ ಬಗ್ಗೆ ವರದಿ ಕೇಳಿದ್ದೇವೆ. ಇದು ಪ್ರಾಮುಖ್ಯವಾದಂಥ ಸಂಗತಿ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು, ಮಾನ್ಯ ಹಿರಿಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ. ಇದರ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಬಹುದು. ಇದನ್ನು ಪರಿಹರಿಸಲು ಸರ್ಕಾರ ಪ್ರಯತ್ನ ಮಾಡುತ್ತದೆ.

ಅಧ್ಯಕ್ಷರು:– ಆಯಿತು, ಇದನ್ನು ತೆಗೆದುಕೊಳ್ಳೋಣ. ಅಗತ್ಯವಾದರೆ ಸದನ ಸಮಿತಿ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರು ಸದನ ಸಮಿತಿ ಮಾಡೋಣ ಎಂದು ಹೇಳಿದರು. ಮುಖ್ಯಮಂತ್ರಿಗಳಿಗೆ ಸಲಹೆ ಕೊಟ್ಟು ಅದನ್ನು ಮಾಡಿಸಿ.

ಅಧ್ಯಕ್ಷರು:– ಆಯಿತು, ವರದಿ ತೆಗೆದುಕೊಂಡು ಅಗತ್ಯವಾದರೆ ಸದನ ಸಮಿತಿಯನ್ನು ರಚಿಸೋಣ.

ಅಧ್ಯಕ್ಷರು:– ಈಗ ಸಿ. ಟಿ. ರವಿಯವರು, ಬೇಗ, ಎರಡು ನಿಮಿಷದಲ್ಲಿ ಮುಗಿಸಬೇಕು.

(ಒ) ವಿಷಯ : ಮುಂದಿನ ನಾಲ್ಕು ದಶಕಗಳಲ್ಲಿ ಕಾವೇರಿ ನದಿ ಬತ್ತಿಹೋಗುತ್ತದೆ ಎನ್ನುವ ವರದಿಯ ಹಿನ್ನಲೆಯಲ್ಲಿ ಕಾವೇರಿ ನದಿಯನ್ನು ಹಾಗೂ ರಾಜ್ಯದ ಇತರ ನದಿಗಳನ್ನು ಉಳಿಸಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವ ಬಗ್ಗೆ.